**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ</u>**
**<u>ಇಂದು ದಿನಾಂಕ 30.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರ 2 ರವರ ಪರ ವಕೀಲರಾದ ಶ್ರೀ ಎ ಸಿ ಎನ್ ರವರ ಪರವಾಗಿಃ</u>**

ಈ ಅಪಘಾತವಾದ ನಂತರ ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆನಿರುವುದಿಲ್ಲ ಎಂದರೆ ಸರಿ. ಗಾಯಾಳುವಿಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುವುದಿಲ್ಲ ಎಂದರೆ ಸರಿ. ಈ ಗಾಯಾಳು ನಮ್ಮ ಆಸ್ಪತ್ರೆಗೆ ದಿಃ 10.05.2024 ರಂದು ಚಿಕಿತ್ಸೆಗಾಗಿ ಬಂದಿರುವರು. ಆ ದಿನ ಗಾಯಾಳು ಕೇವಲ ಅಂಗನ್ಯೂನತೆ ಪ್ರಮಾಣ ಪತ್ರ ಪಡೆದುಕೊಳ್ಳಲು ನಮ್ಮ ಆಸ್ಪತ್ರೆಗೆ ಬಂದಿದ್ದನು ಅಂತ ಸೂಚಿಸುವುದು ಸರಿಯಲ್ಲ. ಗಾಯಾಳುವಿಗೆ ಬಾಗಲಕೋಟೆಯ ಸರಕಾರಿ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಮೂಳೆ ಮುರಿತವಾಗಿದ್ದರೆ ಅದರ ಗಾಯವನ್ನು ತಡೆಯಲು ಆಗುವುದಿಲ್ಲ , ಆ ಗಾಯವಾದ 2-3 ದಿನಗಳಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಬೇಕು ಅಂತ ಸೂಚಿಸುವುದು ಸರಿಯಲ್ಲ. ಗಾಯಾಳುವಿಗೆ ಬಲಮುಂಗಾಲಿನ ಸಂದಿಗೆ ಶಸ್ತ್ರ ಚಿಕಿತ್ಸೆ ಮಾಡಿರುವೆನು. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಗಾಯಾಳುವಿಗೆ ದಿಃ 25.04.2024 ರಂದು ಅಪಘಾತದಲ್ಲಿ ಆದ ಗಾಯಕ್ಕೆ ಸಂಬಂದಪಟ್ಟಂತೆ ನಾನು ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ಈ ಶಸ್ತ್ರ ಚಿಕಿತ್ಸೆಯನಂತರ ಗಾಯಾಳುವಿನ ಮೂಳೆಯು ಕುಡಿದ್ದು ಅದು ಮೊದಲಿನ ಸ್ಥಿತಿಯಲ್ಲಿ ಇರುವುದು ಎಂದರೆ ಸರಿಯಲ್ಲ, ಅದು ಅಂಕುಡೊಂಕು ಇರುವುದು. ಇದಕ್ಕೆ ಸಂಬಂದಪಟ್ಟಂತೆ ಹೆಚ್ಚಿನ ಚಿಕಿತ್ಸೆಗಾಗಿ ನಾನು ಸಲಹೆ ನೀಡಿರುವುದಿಲ್ಲ. ಈ ಗಾಯಕ್ಕೆ ಸಂಬಂದಪಟ್ಟಂತೆ ಹೆಚ್ಚಿನ ಚಿಕಿತ್ಸೆ ಪಡೆದರೆ ಅದು ಕೂಡ ಸುಸ್ಥಿತಿಗೆ ಬರುವುದು ಎಂದರೆ ಸರಿಯಲ್ಲ.

2. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮೂಳೆ ಮುರಿತನ ಚಲನವಲನ ಕ್ರಿಯೆಯ ಬಗ್ಗೆ ಮಾತ್ರ ನಮೂದಿಸಿರುವೆನು. ನಾನು ಗಾಯಾಳುವಿಗೆ ಶಾರೀರಕ ಅಂಗನ್ಯೂನತೆಯನ್ನು ನೀಡಿರುವೆನು, ಆದರೆ ಆ ಭಾಗದ ದುಡಿಯುವ ಸಾಮರ್ಥದ ಅಂಗನ್ಯೂನತೆಯ ಬಗ್ಗೆ ನಾನು ನಮೂದು ಮಾಡಿರುವುದಿಲ್ಲ. ಗಾಯಾಳು ಯಾವುದೇ ಕೆಲಸ ಮಾಡಲು ಸಾಮರ್ಥವಿರುವುದಿಲ್ಲ ಎಂದು ಹೇಳಿ ನಾನು ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿ. ಅರ್ಜಿದಾರ ತನ್ನ ದೈನದಿಂದ ಕೆಲಸಗಳನ್ನು ಸರಾಗವಾಗಿ ಮಾಡಿಕೊಳ್ಳಬಹುದು ಎಂದರೆ ಸರಿಯಲ್ಲ. ನಾನು ನೀಡಿರುವ ಅಂಗನ್ಯೂನತೆಯು ಆ ಗಾಯಕ್ಕೆ ಸಂಬಂದಪಟ್ಟಿರುವುದು, ಆದರೆ ಸಂಪೂರ್ಣ ಶರೀರಕ್ಕೆ ಸಂಬಂದಪಟ್ಟಿರುವುದಿಲ್ಲ. ನಾನು ಈ ಅಂಗನ್ಯೂನತೆಯ ಪ್ರಮಾಣಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಅಂಕಿಸಂಖ್ಯೆಗಳ ಕೂಡಿಸಿ ಬರೆದಿರುವುದಿಲ್ಲ ಎಂದರೆ ಸರಿ,

ಆದರೆ ನಾನು ಈ ಅಂಗನ್ಯೂನತೆಯನ್ನು ಅಲಮ್ ಕೋರ್ ವೈದ್ಯಕೀಯ ಶಾಸ್ತ್ರದ ಮೂಲಕ ನೀಡಿರುವೆನು. ನಾನು ಈ ಅಂಗನ್ಯೂನತೆಯನ್ನು ನನ್ನ ವೈದ್ಯಕೀಯ ಅನುಭವದ ಆಧಾರದ ಮೇಲೆ ನೀಡಿರುವೆನು ಎಂದರೆ ಸರಿಯಲ್ಲ. ನಾನು ಅಂಗನ್ಯೂನತೆಯ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ ಗಾಯಾಳುವನ್ನು ಯಾವುದೇ ಕ್ಲೀನಿಕಲ್ ಪರೀಕ್ಷೆಗೆ ಒಳಪಡಿಸದೆ ನೀಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುಳಿಗೆ ಆಗಿರುವ ಗಾಯಗಳು ಈ ಅಪಘಾತದಿಂದ ಆದ ಗಾಯಗಳು ಆಗಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ಅಂಗನ್ಯೂನತೆಗೆ ಸಂಬಂದಪಟ್ಟಂತೆ ವೈದ್ಯರಿಂದ ವೈದ್ಯರಿಗೆ ಬೇರೆಯಾಗುವುದು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು.

3. ದಿಃ 13.06.2022 ರ ರೂ.66,470/- ರ ಬಿಲ್ ದಿಃ 16.05.2024 ರಂದು ನೀಡಿರುವ ಬಿಲ್ ನಲ್ಲಿ ಒಳಗೊಂಡಿರುವುದು ಎಂದರೆ ಸರಿ. ನಿಪಿ 10 ರಲ್ಲಿ ನಮೂದು ಮಾಡಿರುವ ಔಷಧಿಯ ಬಿಲ್ ಗಳಿಗೆ ಸಂಬಂಧಪಟ್ಟಂತೆ ನಾನು ವೈದ್ಯಕೀಯ ಸಲಹಾ ಚೀಟಿಗಳನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಒಂದು ದಿನಕ್ಕೆ ಸುಮಾರು 80-90 ಹೊರ ರೋಗಿಗಳನ್ನು ಪರೀಕ್ಷಿಸುತ್ತೇನೆ. ಔಷಧಿಯ ಬಿಲ್ ಗಳು ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ಸೃಷ್ಠಿ ಮಾಡಿಕೊಟ್ಟಿದ್ದೇವೆ ಅಂತ ಸೂಚಿಸುವುದು ಸರಿಯಲ್ಲ. ಸಾಮಾನ್ಯವಾಗಿ ಬೇರೆ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡುವ ಪೂರ್ವದಲ್ಲಿ ಅರವಳಿಕೆ ಚುಚ್ಚು ಮದ್ದಕ್ಕೆ ಸಂಬಂದಪಟ್ಟದಂತೆ 2000/- ರಿಂದ 2500/- ಬಿಲ್ ನ್ನು ಮಾಡುತ್ತಾರೆ, ಈ ಪ್ರಕರಣದಲ್ಲಿ ರೂ 5000/- ಬಿಲ್ ನ್ನು ಹೆಚ್ಚಿಗೆ ಮಾಡಿರುವರು ಎಂದರೆ ಸರಿಯಲ್ಲ. ಈ ಬಿಲ್ ನ್ನು ಅರವಳಿಕೆ ಮದ್ದಿನ ವೈದ್ಯರು ನೀಡಿರುವರು. ಅರ್ಜಿದಾರ ಹಾಜರು ಪಡಿಸಿರುವ ವೈದ್ಯಕೀಯ ಬಿಲ್ ಗಳಿಗೆ ನಮ್ಮ ಆಸ್ಪತ್ರೆ ಯ registration number ಇರುವುದಿಲ್ಲ ಎಂದರೆ ಸರಿ. ಈ ಬಿಲ್ ಗಳನ್ನು ಅರ್ಜಿದಾರನಿಗೆ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಠಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ